ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಿಕ್ಕಬೂದನೂರು ನೀರಾವರಿ ಯೋಜನೆ

94 (1165) ಶ್ರೀ ಎಂ. ಎಸ್. ಕೌಜಲಗಿ(ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನಲ್ಲಿ ಚಿಕ್ಕಬೂಜನೂರ ನೀರಾವರಿ ಕೆಲಸಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಎಂದು ನೀಡಲಾಯಿತು : ಇದರ ಅಂದಾಜು ವೆಚ್ಚವೆಷ್ಟು;

ಆ) ಈ ಕೆಲಸವನ್ನು ಎಷ್ಟು ದಿನಗಳಲ್ಲಿ ಮುಗಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿತ್ತು;

ಇ) ಈ ಕೆಲಸ ಸ್ಥಗಿತಗೊಂಡಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಗುತ್ತಿಗೆದಾರರು ಈ ಕೆಲಸವನ್ನು ನಿರ್ಮಿಸಲು ಆಗುವುದಿಲ್ಲವೆಂದು ಸರ್ಕಾರಕ್ಕೆ ತಿಳಿಸಿರುವುದು ನಿಜವೇ? ಹಾಗಿದ್ದಲ್ಲಿಈ ಬಗ್ಗೆ ಕೈಗೊಂಡ ಕ್ರಮವೇನು?

ಉ) ಈ ಕೆಲಸ ಸ್ಥಗಿತಗೊಂಡಿರುವುದರಿಂದ ವಿನಾಕಾರಣ ಈ ಕೆಲಸದ ವೆಚ್ಚ ಹೆಚ್ಚಾಗುವುದಲ್ಲದೆ ರೈತರಿಗೆ ನಿಗಧಿಪಡಿಸಿದ ವೇಳೆಯಲ್ಲಿ ನೀರನ್ನು ಪೂರೈಸದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಈ ಕೆಲಸವನ್ನು ಎಷ್ಟು ದಿನಗಳಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬೆಳಗಾಂ ಜಿಲ್ಲೆಯ ಸೌದತ್ತಿ ತಾಲ್ಲೂಕಿನ ಚಿಕ್ಕ ಬೂದನೂರು ಹತ್ತಿರ ಕೆರೆಯ ನಿರ್ಮಾಣ ಯೋಜನೆಗೆ 129 : 23 ಲಕ್ಷ ರೂ. ಗಳಿಗೆ ಸರ್ಕಾರದ ಆದೇಶ ಸಂ: ನೀಇ 117 : ಸನೀಬೆ: 91: ಬೆಂಗಳೂರು : ದಿ: 13- 1- 92ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ.

ಆ) ಈ ಕೆಲಸವನ್ನು 1ನೇ ದರ್ಜೆಯ ಗುತ್ತಿಗೆ ದಾರರಿಗೆ ಟೆಂಡರ್ ಗುತ್ತಿಗೆಯ ಆಧಾರದ ಮೇಲೆ ವಹಿಸಿಕೊಡಲಾಗಿತ್ತು. ಈಗುತ್ತಿಗೆಯ ಅವಧಿಯು 18 ತಿಂಗಳು ಮಳೆಗಾಲ ಹೊರತುಪಡಿಸಿ ನಿಗದಿಪಡಿಸಲಾಗಿತ್ತು. ದಿ: 19- 2- 96 ರಿಂದ 18- 2- 98ರ ಒಳಗಾಗಿ.

ಇ) - ಬಂದಿದೆ -

ಈ) ಗುತ್ತಿಗೆದಾರರು ಅವರ ಮನವಿ ದಿ: 17- 5- 99ರಲ್ಲಿ ತಮ್ಮ ಕೆಲಸವನ್ನು ಮೊಟಕುಗೊಳಿಸಲುವಿನಂತಿಸಿದ್ದಾರೆ. ಈ ಮೇರೆಗೆ ಅವರ ಕೆಲಸ ಮಾಡಿದ ಅಂತಿಮ ಅಳತೆಗಳನ್ನು ದಿ: 12- 6- 99ರಂದು ಪಂಚರ ಸಮ್ಮುಖ ತೆಗೆದುಕೊಂಡು ಗುತ್ತಿಗೆ ದಾರರ ಅಂತಿಮಬಿಲ್ಲು ಮಾಡಲಾಗಿದೆ. ಬಾಕಿ ಕೆಲಸದ ಮರು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ. ಕೆಲಸದ ಹೆಚ್ಚಾದ ವೆಚ್ಚವನ್ನು ಹಿಂದಿನ ಗುತ್ತಿಗೆದಾರರಿಂದ ವಸೂಲಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ಈ ಕೆಲಸವನ್ನು ಮರು ಟೆಂಡರ್ ಕರೆದು ಪೂರ್ತಿ ಗೊಳಿಸಲು ಸುಮಾರು 12 ತಿಂಗಳು (ಮಳೆಗಾಲ ಹೊರತುಪಡಿಸಿ) ಅವಧಿ ಬೇಕಾಗುವುದು)

ಶ್ರೀ ಎಂ.ಎಸ್.ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಮತಕ್ಷೇತ್ರದಲ್ಲಿ ಚಿಕ್ಕಬೂದನೂರು ಹತ್ತಿರ ಕೆರೆಯೊಂದರ ನಿರ್ಮಾಣದ ಸಲುವಾಗಿ 1992ರಲ್ಲಿ ಸುಮಾರು 1.30 ಲಕ್ಷ ರೂಪಾಯಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿತ್ತು. ಆ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂಬುದನ್ನು ಮಾನ್ಯ ಸಚಿವರೂ ಕೂಡ ಒಪ್ಪಿಕೊಂಡಿದ್ದಾರೆ. ಯಾವ ಕಾರಣಕ್ಕಾಗಿ ಈ ಒಂದು ಯೋಜನೆ ಸ್ಥಗಿತಗೊಂಡಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಈ ಒಂದು ಯೋಜನೆಯಿಂದ ಒಟ್ಟು ಎಷ್ಟು ಎಕರೆಗೆ ನೀರಾವರಿ ಸೌಲಭ್ಯವನ್ನು ದೊರಕಿಸಿಕೊಡಬಹುದು ಎಂಬುದನ್ನೂ ಸಹಾ ಮಾನ್ಯ ಸಚಿವರು ಹೇಳಬೇಕು. ಸರ್ಕಾರ ಈ ಯೋಜನೆಯನ್ನು ಯಾವಾಗ ಪ್ರಾರಂಭಮಾಡಿ, ಯಾವಾಗ ಮುಕ್ತಾಯಗೊಳಿಸುತ್ತದೆ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಸುಮಾರು 1186 ಎಕರೆಗಳಷ್ಟು ಅಚ್ಚುಕಟ್ಟು ಪ್ರದೇಶ ಈ ಯೋಜನೆಯ ವ್ಯಾಪ್ತಿಗೆ ಬರುತ್ತದೆ. ಈ ಯೋಜನೆಗೆ 1992ರಲ್ಲೇ ಮಂಜೂರಾತಿ ನೀಡಿದ್ದರೂ ಕೂಡ ಆ ಮಧ್ಯೆ ಕಂಟ್ರಾಕ್ಟರ್‌ನ ಸಮಸ್ಯೆಯಿಂದಾಗಿ ಈ ಕೆಲಸ ಅರ್ಧದಲ್ಲೇ ನಿಂತು ಹೋಗಿದೆ. ಗುತ್ತಿಗೆದಾರರು ಕೆಲಸ ಶುರು ಮಾಡಿ, ತದನಂತರ ಆ ಕೆಲಸವನ್ನು ನನಗೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದರಿಂದ ಆ ಕೆಲಸವನ್ನು ಅವರಿಂದ ವಾಪಸ್ ಪಡೆಯಲಾಯಿತು. ಈಗಾಗಲೇ ಇಲಾಖೆಯ ವತಿಯಿಂದ ಸಂಬಂಧಪಟ್ಟ ಗುತ್ತಿಗೆದಾರರಿಂದ ಏನು ಕೆಲಸ ಅಲ್ಲಿ ಹಾಳಾಗಿದೆಯೋ ಅದಕ್ಕಾಗುವ ವೆಚ್ಚವನ್ನು ಅವರಿಂದ ಭರಿಸತಕ್ಕಂಥ ವಿಚಾರದಲ್ಲಿ ಕ್ರಮವನ್ನು ಕೈಗೊಳ್ಳಲಾಗಿದೆ. ಈ ಕೆಲಸವನ್ನು ಮರು-ಟೆಂಡರ್ ಮೂಲಕ ಬೇರೊಬ್ಬರಿಗೆ ವಹಿಸಲೂ ಕೂಡ ಸರ್ಕಾರ ವಿಚಾರ ಮಾಡಿದೆ. ತಕ್ಷಣವೇ ಸರ್ಕಾರ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತದೆ. ಈಗಾಗಲೇ ಈ ಕೆಲಸದ ಅನುಷ್ಠಾನದಲ್ಲಿ ಸಾಕಷ್ಟು ತಡವಾಗಿದೆ. ಸುಮಾರು 5-6 ತಿಂಗಳುಗಳಿಂದ ಕೆಲಸ ನಿಂತು ಹೋಗಿದೆ. ತಕ್ಷಣವೇ ಮರು-ಟೆಂಡರ್ ಕರೆದು ಈ ಕೆಲಸವನ್ನು ಶುರು ಮಾಡುತ್ತೇವೆ ಎಂದು ನಾನು ಮಾನ್ಯ ಸದಸ್ಯರಿಗೆ ತಿಳಿಯ ಬಯಸುತ್ತೇನೆ.

ಶ್ರೀ ಎಂ.ಎಸ್.ಕೌಜಲಗಿ : ಮಾನ್ಯ ಅಧ್ಯಕ್ಷರೇ, ಸರ್ಕಾರ ಯಾವಾಗ ಮರುಟೆಂಡರ್ ಕರೆಯುತ್ತದೆ ಎಂಬುದನ್ನು ಮಾನ್ಯ ಸಚಿವರು ನಿರ್ದಿಷ್ಟವಾಗಿ ಹೇಳಬೇಕು. ನಾನು ಕಳೆದ ಎರಡು ವರ್ಷಗಳಿಂದಲೂ ಈ ಸದನದಲ್ಲಿ ಇದೇ ಪ್ರಶ್ನೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ ನನಗೆ ಪ್ರತಿ ಸಾರಿಯೂ ಕೂಡ ಸರ್ಕಾರದಿಂದ ಇದೇ ರೀತಿಯಾದಂತಹ ಉತ್ತರ ಬರುತ್ತಿದೆ. ಅದಕ್ಕಾಗಿ ಸರ್ಕಾರದವರು ನಿರ್ದಿಷ್ಟವಾಗಿ ಯಾವಾಗ ಮರು-ಟೆಂಡರ್ ಕರೆಯಲಾಗುತ್ತಿದೆ ಎಂಬುದನ್ನು ಹೇಳಬೇಕು. ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಯಾವಾಗ ಮುಗಿಸುತ್ತೀರಿ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಮಾನ್ಯ ಸಚಿವರ ತಂದೆಯವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಈ ಕಾಮಗಾರಿ ಪ್ರಾರಂಭವಾಗಿತ್ತು. ಕನಿಷ್ಟ ಈಗಿನ ಮಾನ್ಯ ಸಚಿವರ ಅಧಿಕಾರವಧಿಯಲ್ಲಿ ಆದರೂ ಈ ಕಾಮಗಾರಿಯನ್ನು ಮುಗಿಸುವ ಭರವಸೆಯನ್ನು ನೀಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಹಣದ ಲಭ್ಯತೆಯನ್ನು ಕೂಡ ನಾವು ನೋಡಬೇಕಾಗುತ್ತದೆ. ಇದಕ್ಕೆ ಅಗತ್ಯವಾದ, ಸಂಪೂರ್ಣವಾದ ಹಣವನ್ನು ಒದಗಿಸಿಕೊಂಡು ಈ ಬಾರಿಯ ಮಳೆಗಾಲ ಮುಗಿಯುತ್ತಿದ್ದಂತೆ ಸದರಿ ಕಾಮಗಾರಿಗಳನ್ನು ಆರಂಭಿಸಿ ಮುಂದಿನ ಬೇಸಿಗೆಯೊಳಗಾಗಿ ಸಂಪೂರ್ಣವಾಗಿ ಮುಗಿಸಿಕೊಡುತ್ತೇವೆ ಎಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.